ಕೊಟ್ಟುಬಿಡು' ಅಂತ. 'ಆ ಜೀವ ತುಂಬಾ ನೊಂದು ಹೋಗಿದೆ. ಅವಳಿಗೆ ಸರಿಯಾದ ನ್ಯಾಯ ಒದಗಿಸಲು ನನಗೆ ಆಗಲಿಲ್ಲ. ಸಾಧ್ಯ ಆದರೆ ಕ್ಷಮಿಸಲು ಹೇಳು' ಅಂತ.

ನಾನು ಮತ್ತೆ ಬಂದ ಸುದ್ದಿ ಕೇಳಿ ಸುಮತಿಗೆ ಸಂಭ್ರಮ ಆಗಿತ್ತು. ಅವಳಿಗೆ ಯಾರೂ ಇಲ್ಲದಂತೆ ಆಗಿತ್ತು. ಜೊತೆಯಲ್ಲೇ ಒಂದು ಅಳುಕು ಕೂಡ ಅವಳನ್ನು ಕಾಡುತ್ತಿತ್ತು. ಅವಳು ಯಾರ ಮೂಲಕವೋ ಪಂಕಜಳ ಮನೆ ಕಂಡು ಹಿಡಿದು, ಅವಳಿಂದ ನಾನಿರುವ ಮನೆ ತಿಳಿದು ಬಂದಿದ್ದಳು. ಪುಟ್ಟ ಪ್ರಭ ಮನೆ ಮುಂದೆ ಆಡುತ್ತಿದ್ದಾಗ 'ಅಮ್ಮ ಇದ್ದಾರ?' ಅಂದ ಧ್ವನಿ ಕೇಳಿ ನನ್ನ ಮನದ ಅಲೆಗಳು ಕುಣಿದಾಡಿದ್ದವು. ಹೊರ ಓಡಿ ಅವಳನ್ನು ಅಪ್ಪಿಕೊಂಡಿದ್ದೆ. 'ಅಕ್ಕ ತಪ್ಪು ತಿಳಿಬೇಡ ಕಣೆ. ನನಗೆ ಯಾವ ಗಂಡೂ ಆಯ್ಕೆಯಾಗದಾಗ ಅಪ್ಪನೇ ಈ ನಿರ್ಧಾರ ತೊಗೊಂಡಿದ್ದು. ಜೊತೆಗೆ ಊರವರೆಲ್ಲ ನಿಮ್ಮಿಂದನೇ ಅವರ ವಂಶ ನಿಂತು ಹೋಗುತ್ತೆ. ಶಾಪ ನಿಮಗೇ ತಟ್ಟುತ್ತೆ ಅಂತೆಲ್ಲ ಹೇಳುತ್ತಿದ್ದರು. ಅಪ್ಪ ಅದನ್ನ ಸರಿ

